**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.**185/2020

**PW.** 3

**CW.** 4

**ಸಾಕ್ಷಿಯ ಹೆಸರು – ವೆಂಕಟೇಶ**

**ತಂದೆಯ ಹೆಸರು – ದಾಸಶೆಟ್ಟಿ**

**ವಯಸ್ಸು – 50 ವರ್ಷಗಳು** ದಿನಾಂಕ 23.12.2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ – ವ್ಯವಸಾಯ**

**ವಾಸಸ್ಥಳ – ಚಾಮಲಾಪುರ, ಹೆಚ್.ಡಿ. ಕೋಟೆ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ದಾಸಶೆಟ್ಟಿ ನನ್ನ ತಂದೆ. ಚಾಸಾ 1 ನನ್ನ ತಾಯಿ. ಚಾಸಾ 8 ನನ್ನ ಸಹೋದರರನ ಹೆಂಡತಿ. ಚಾಸಾ 13, 14 ನನ್ನ ಸಹೋದರರು. ಈಗ್ಗೆ 8 ವರ್ಷಗಳ ಹಿಂದೆ ಮೃತ ದಾಸಶೆಟ್ಟಿ ಅವರ ಮನೆಯ ಹಿಂದೆ ವಿಷ ಕುಡಿದು, ಆತ್ಮಹತ್ಯೆ ಮಾಡಿಕೊಂಡಿದರು. ಚಾಸಾ 8 ಅಂಗನವಾಡಿ ಕಾರ್ಯಕರ್ತೆ. 1 ನೇ ಆರೋಪಿಯು ಗ್ರಾಮ ಪಂಚಾಯಿತ ಸದಸ್ಯನಾಗಿದ್ದು, ಚಾಸಾ 8 ರವರಿಗೆ ಕಿರುಕುಳ ನೀಡುತ್ತಿದ್ದ. ನನ್ನ ತಂದೆ ವಿಷ ಸೇವಿಸಿದ ದಿನ ಬೆಳಿಗ್ಗೆ 8 ಗಂಟೆಗೆ 1 ನೇ ಆರೋಪಿ ಅಂಗನವಾಡಿ ಕೇಂದ್ರದ ಬಳಿ ಹೋಗಿ ಚಾಸಾ 8 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ. ಆ ಬಗ್ಗೆ ಚಾಸಾ 8 ನನಗೆ ಮತ್ತು ನನ್ನ ಸಹೋದರನಿಗೆ ದೂರವಾಣಿ ಕರೆ ಮಾಡಿ ಹೇಳಿದರು. ಆಗ ನಾವು ಕೇಂದ್ರದ ಬಳಿ ಹೋದೇವು. ಆಗ ಚಾಸಾ 8 ರವರಿಗೆ 1 ನೇ ಆರೋಪಿ ಬೈಯುತ್ತಿದ್ದ. ಅವರನ್ನು ಸಮಾಧಾನ ಮಾಡಿ ಕಳುಹಿಸಿದೇವು.

ನಂತರ ಸಂಜೆ 5.30 ಗಂಟೆ ಸಮಾರಿಗೆ ನಾನು, ಚಾಸಾ 13 ನಮ್ಮ ಮನೆಯ ಬಳಿ ಇರುವಾಗ ಆರೋಪಿತರು ಗುಂಪು ಕಟಿಟಕೊಂಡು ಮನೆಯ ಬಳಿ ಬಂದು 1 ನೇ ಆರೋಪಿಯು ಕಬ್ಬಿಣದ ಪೈಪು, ಮತ್ತು ಇತರ ಆರೋಪಿತರು ಮಚ್ಚು ದೊಣ್ಣೆ ಹಿಡಿದುಕೊಂಡು ನನಗೆ ಮತ್ತುಚಾಸಾ 13 ರವರಿಗೆ ನನ್ನ ಮಗ ಬಂಗಾರನಿಗೆ ಹೊಡೆದು ಗಾಯ ಮಾಡಿದರು. ಆಗ ನಮ್ಮ ಊರಿನವರು ಬಂದು ಜಗಲ ಬಿಡಿಸಿದೇವು. ನಂತರ ನಾವೆಲ್ಲಾ ಕೆ ಆರ್ ಆಸ್ಪತ್ರೆಗೆ ಹೋವುದೆವು. ನಾವು ಆಸ್ಪತೆರಯಲ್ಲಿ ಚಿಕಿತ್ಸೆ ಪಡೆಯುವಾಗ ಚಾಸಾ 2 ರವರನ್ನು ಆ್ಯಂಬುಲೆನ್ಸ್‌ನಲ್ಲಿ ನಜಮ್ಮ ತಂದೆಯನ್ನು

ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಬಂದರು. 4 ದಿನಗಳವರೆಗೆ ನಮ್ಮ ತಂದೆ ಪ್ರಜ್ಞಾಹೀನವಾಗಿ ಆಸ್ಪತ್ರೆಯಲ್ಲಿ ಇದ್ದು ತೀರಿಕೊಂಡರು. 1ನೇ ಆರೋಪಿ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದರಿಂದ ಆಗಿಂದಾಗ್ಗೆ ನಮ್ಮ ವಿರುದ್ಧ ಗಲಾಟೆ ಮಾಡುತ್ತಿದ್ದರು. ಆರೋಪಿತರು ಬೈದು ಅವಮಾನ ಮಾಡಿದ್ದರಿಂದ ನನ್ನ ತಂದೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡರು. ಆರೋಪಿತರು ನಮಗೆ ಹೊಡೆದಿದ್ದರಿಂದ ಚಾಸಾ 8 ರವರು ಹೆಚ್.ಡಿ. ಕೋಟೆ ಠಾಣೆಯಲ್ಲಿ ದೂರು ನೀಡಿದ್ದರು. ಅದೇ ರೀತಿ ಆರೋಪಿತರು ನಮ್ಮ ವಿರುದ್ಧ ದೂರು ನೀಡಿದ್ದಾರೆ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಕೆ.ಸಿ.ಬಿ ವಕೀಲರಿಂದಃ-**

ದಿಃ 24.04.2016 ರಂದು ಬೆಳಿಗ್ಗೆ ಚಾಸಾ 8 ರವರು ಆರೋಪಿತರ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿ. 1ನೇ ಆರೋಪಿಯು ದಿಃ 23.04.2016 ರಂದು ರಾತ್ರಿ 11 ಗಂಟೆಗೆ ನಮ್ಮ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿ. ನಾವು ಆಸ್ಪತ್ರೆಯಲ್ಲಿ ದಾಖಲಾದ ಸಮಯದಲ್ಲಿ ವೈದ್ಯರು ಹಲ್ಲೆಯ ಹಿನ್ನಲೆಯನ್ನು ಕೇಳಿದ್ದರು. ಪೋಲಿಸರು ಹೇಳಿಕೆ ನೀಡುವ ಸಮಯದಲ್ಲಿ ನಮ್ಮ ತಂದೆ ವಿಷ ಸೇವನೆ ಮಾಡಿದ ವಿಚಾರವನ್ನು ಹೇಳಿಲ್ಲ ಎಂದರೆ ಸರಿ. ನಮ್ಮ ತಂದೆ ಆಸ್ಪತ್ರೆಗೆ ದಾಖಲಾದ ಮರುದಿನ ಪೋಲಿಸರು ಆಸ್ಪತ್ರೆಗೆ ಬಂದಿದ್ದರು. ನಮ್ಮ ತಂದೆ ವಿಷ ಸೇವನೆ ಮಾಡಿದ ವಿಚಾರ ಆ ದಿನ ರಾತ್ರಿ 8.30 ಗಂಟೆಯ ವೇಳೆಗೆ ಗೊತ್ತಾಯಿತು. ನಮ್ಮ ತಂದೆ ವಿಷ ಕುಡಿದ ಹಿನ್ನಲೆ ಬಗ್ಗೆ ಪೋಲಿಸರು ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದಾರೆ. ಯಾರ್ಯಾರನ್ನು ವಿಚಾರಣೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಗಲಾಟೆಯಾದ ಸಂಬಂಧ 1ನೇ ಆರೋಪಿ ಮತ್ತು ಇತರರು ಹೆಚ್.ಡಿ. ಕೋಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸರಿ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದರಿಂದ ನಮ್ಮ ತಂದೆ ವಿಷ ಸೇವನೆ ಮಾಡಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.